ನಾನು ನಿನ್ನನ್ನು ಬಿಟ್ಟುಹೋದ ನಂತರ ನಾಲ್ಕು ವಚನಗಳನ್ನು ಮೂರು ಬಾರಿ ಹೇಳಿದ್ದೇನೆ. ನೀನು ಬೆಳಗ್ಗಿನಿಂದ ಹೇಳಿದ್ದೆಲ್ಲವನ್ನೂ ಅದರೊಂದಿಗೆ ತೂಗಿ ನೋಡಿದರೆ, ಖಂಡಿತವಾಗಿಯೂ ಅವು (ನಾನು ಹೇಳಿದ ವಚನಗಳು) ಹೆಚ್ಚು ತೂಗುತ್ತಿದ್ದವು

ಸತ್ಯವಿಶ್ವಾಸಿಗಳ ಮಾತೆ ಜುವೈರಿಯ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ. ಪ್ರವಾದಿಯವರು (ಅವರ ಮೇಲೆ ಅಲ್ಲಾಹುವಿನ ಕೃಪೆ ಮತ್ತು ಶಾಂತಿಯಿರಲಿ) ಸುಬ್ಹ್ (ಫಜ್ರ್) ನಮಾಝ್ ಮಾಡಿದ ನಂತರ ಮುಂಜಾನೆ ಬೇಗನೆ ಆಕೆಯ ಬಳಿಯಿಂದ ಹೊರಟು ಹೋದರು. ಆಗ ಆಕೆ ತನ್ನ ನಮಾಝ್ ಮಾಡುವ ಸ್ಥಳದಲ್ಲಿ (ಮುಸಲ್ಲಾದಲ್ಲಿ) ಇದ್ದರು. ನಂತರ, ಪೂರ್ವಾಹ್ನದ ಹೊತ್ತು (ದುಹಾ ಸಮಯ) ಕಳೆದ ಮೇಲೆ ಪ್ರವಾದಿಯವರು (ಅವರ ಮೇಲೆ ಅಲ್ಲಾಹುವಿನ ಕೃಪೆ ಮತ್ತು ಶಾಂತಿಯಿರಲಿ) ಹಿಂತಿರುಗಿದರು. ಆಕೆ ಆಗಲೂ (ಅದೇ ಸ್ಥಳದಲ್ಲಿ) ಕುಳಿತಿದ್ದರು. ಆಗ ಪ್ರವಾದಿಯವರು (ಅವರ ಮೇಲೆ ಅಲ್ಲಾಹುವಿನ ಕೃಪೆ ಮತ್ತು ಶಾಂತಿಯಿರಲಿ) ಕೇಳಿದರು: "ನಾನು ನಿನ್ನನ್ನು ಬಿಟ್ಟು ಹೋದಾಗಿನಿಂದ ನೀನು ಇದೇ ಸ್ಥಿತಿಯಲ್ಲಿಯೇ ಇರುವೆಯಾ?". ಆಕೆ ಹೇಳಿದರು: "ಹೌದು". ಆಗ ಪ್ರವಾದಿಯವರು (ಅವರ ಮೇಲೆ ಅಲ್ಲಾಹುವಿನ ಕೃಪೆ ಮತ್ತು ಶಾಂತಿಯಿರಲಿ) ಹೇಳಿದರು: "ನಾನು ನಿನ್ನನ್ನು ಬಿಟ್ಟುಹೋದ ನಂತರ ನಾಲ್ಕು ವಚನಗಳನ್ನು ಮೂರು ಬಾರಿ ಹೇಳಿದ್ದೇನೆ. ನೀನು ಬೆಳಗ್ಗಿನಿಂದ ಹೇಳಿದ್ದೆಲ್ಲವನ್ನೂ ಅದರೊಂದಿಗೆ ತೂಗಿ ನೋಡಿದರೆ, ಖಂಡಿತವಾಗಿಯೂ ಅವು (ನಾನು ಹೇಳಿದ ವಚನಗಳು) ಹೆಚ್ಚು ತೂಗುತ್ತಿದ್ದವು: 'ಸುಬ್ಹಾನಲ್ಲಾಹಿ ವಬಿ ಹಮ್ದಿಹಿ, ಅದದ ಖಲ್ಕಿಹಿ, ವ ರಿದಾ ನಫ್ಸಿಹಿ, ವ ಝಿನತ ಅರ್ಶಿಹಿ, ವ ಮಿದಾದ ಕಲಿಮಾತಿಹಿ' ". (ಅರ್ಥ: ಅಲ್ಲಾಹು ಪರಿಶುದ್ಧನು ಮತ್ತು ಅವನಿಗೆ ಸರ್ವ
ಸ್ತುತಿಗಳು, ಅವನ ಸೃಷ್ಟಿಗಳ ಸಂಖ್ಯೆಯಷ್ಟು, ಅವನ ಆತ್ಮದ ತೃಪ್ತಿಯಷ್ಟು, ಅವನ 'ಅರ್ಶ್' (ಸಿಂಹಾಸನ)
ನ ತೂಕದಷ್ಟು, ಮತ್ತು ಅವನ ವಚನಗಳ (ಬರೆಯಲು ಬೇಕಾದ) ಶಾಯಿಯಷ್ಟು.) [صحيح] [رواه مسلم]

ಪ್ರವಾದಿಯವರು (ಅವರ ಮೇಲೆ ಅಲ್ಲಾಹುವಿನ ಕೃಪೆ ಮತ್ತು ಶಾಂತಿಯಿರಲಿ) ಸುಬ್ಹ್ ನಮಾಝ್ ಮಾಡಿದ ನಂತರ ತಮ್ಮ ಪತ್ನಿ, ಸತ್ಯವಿಶ್ವಾಸಿಗಳ ಮಾತೆ ಜುವೈರಿಯ್ಯಾ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರವರ ಮನೆಯಿಂದ ದಿನದ ಆರಂಭದಲ್ಲಿ (ಮುಂಜಾನೆ) ಹೊರಟರು. ಆಗ ಆಕೆ ತಮ್ಮ ನಮಾಝ್ ಮಾಡುವ ಸ್ಥಳದಲ್ಲಿ ಕುಳಿತಿದ್ದರು. ನಂತರ, ದಿನದ ಮಧ್ಯಭಾಗವಾದ ದುಹಾ ಸಮಯದ ನಂತರ ಅವರು ಹಿಂತಿರುಗಿದಾಗ, ಆಕೆ ಇನ್ನೂ ತಮ್ಮ ಸ್ಥಳದಲ್ಲಿ ಕುಳಿತಿದ್ದರು. ಆಗ ಪ್ರವಾದಿಯವರು (ಅವರ ಮೇಲೆ ಅಲ್ಲಾಹುವಿನ ಕೃಪೆ ಮತ್ತು ಶಾಂತಿಯಿರಲಿ) ಕೇಳಿದರು: ನಾನು ನಿನ್ನನ್ನು ಬಿಟ್ಟು ಹೋದಾಗಿನಿಂದ ನೀನು ಇದೇ ಸ್ಥಿತಿಯಲ್ಲಿಯೇ ಇರುವೆಯಾ? ಆಕೆ ಹೇಳಿದರು: ಹೌದು. ಆಗ ಪ್ರವಾದಿಯವರು (ಅವರ ಮೇಲೆ ಅಲ್ಲಾಹುವಿನ ಕೃಪೆ ಮತ್ತು ಶಾಂತಿಯಿರಲಿ) ಹೇಳಿದರು: ನಾನು ನಿನ್ನನ್ನು ಬಿಟ್ಟು ಹೋದ ನಂತರ ನಾಲ್ಕು ವಚನಗಳನ್ನು ಹೇಳಿದ್ದೇನೆ ಮತ್ತು ಅವುಗಳನ್ನು ಮೂರು ಬಾರಿ ಪುನರಾವರ್ತಿಸಿದ್ದೇನೆ. ನೀನು ಕುಳಿತಿದ್ದ ಈ ಸಂಪೂರ್ಣ ಸಮಯದಲ್ಲಿ ನೀನು ಹೇಳಿದ್ದೆಲ್ಲವನ್ನೂ ಪುಣ್ಯದ ದೃಷ್ಟಿಯಿಂದ ಇವುಗಳೊಂದಿಗೆ ಹೋಲಿಸಿದರೆ, ಇವು ಖಂಡಿತವಾಗಿಯೂ ಹೆಚ್ಚು ತೂಗುತ್ತಿದ್ದವು: (ಸುಬ್ಹಾನಲ್ಲಾಹ್): ಎಲ್ಲಾ ನ್ಯೂನತೆಗಳಿಂದ ಅವನನ್ನು ಪರಿಶುದ್ಧನೆಂದು ಸಾರುವುದು. (ವಬಿ ಹಮ್ದಿಹಿ): ಅದಕ್ಕೆ ಮಾರ್ಗದರ್ಶನ ನೀಡಿದಕ್ಕಾಗಿ ಸುಂದರವಾದ ಸ್ತುತಿ ಅವನಿಗೆ ಸಲ್ಲುತ್ತದೆ. (ಅದದ ಖಲ್ಕಿಹಿ): ಅವನ ಸೃಷ್ಟಿಗಳ ಸಂಖ್ಯೆಯಷ್ಟು, ಅಲ್ಲಾಹುವಿನ ಹೊರತು ಯಾರಿಗೂ ಅವುಗಳನ್ನು ಎಣಿಸಲಾಗದು. (ವ ರಿದಾ ನಫ್ಸಿಹಿ): ಅಲ್ಲಾಹು ತನ್ನ ದಾಸರಲ್ಲಿ ಯಾರ ಬಗ್ಗೆ ತೃಪ್ತನಾಗುತ್ತಾನೋ, ಅವನಿಗೆ ಆ ತೃಪ್ತಿಯನ್ನು ನೀಡುವ ಪ್ರಮಾಣದಷ್ಟು, ಮತ್ತು ಅದು ಅಳೆಯಲಾಗದ

ವಿಷಯವಾಗಿದೆ. (ವ ಝಿನತ ಅರ್ಶಿಹಿ): ಅವನ 'ಅರ್ಶ್' (ಸಿಂಹಾಸನ) ನ ತೂಕದಷ್ಟು, ಅದು ಸೃಷ್ಟಿಗಳಲ್ಲೇ ಅತ್ಯಂತ ದೊಡ್ಡದು ಮತ್ತು ಭಾರವಾದದ್ದು. (ವ ಮಿದಾದ ಕಲಿಮಾತಿಹಿ): ಮತ್ತು ಅವನ ವಚನಗಳ (ಬರೆಯಲು ಬೇಕಾದ) ಶಾಯಿಯಷ್ಟು. ಅಲ್ಲಾಹುವಿನ ವಚನಗಳು ಮಿತಿಯಿಲ್ಲದವು ಮತ್ತು ಎಂದಿಗೂ ಮುಗಿಯದವು. ಇದು ಹಿಂದಿನ ಮೂರು ಭಾಗಗಳನ್ನೂ ಒಳಗೊಳ್ಳುತ್ತದೆ ಮತ್ತು ಆವರಿಸುತ್ತದೆ. ಏಕೆಂದರೆ ಅಲ್ಲಾಹುವಿನ ವಚನಗಳನ್ನು ಬರೆಯಲು ಬೇಕಾದ ಶಾಯಿ ಅದರ ಪ್ರಮಾಣ, ಗುಣ ಅಥವಾ ಸಂಖ್ಯೆಯಲ್ಲಿ ಯಾವುದೇ ಅಂತ್ಯವನ್ನು ಹೊಂದಿಲ್ಲ. ಆದರೆ ಇಲ್ಲಿನ ಉದ್ದೇಶವು ಅದರ ಅಗಾಧ ಪ್ರಮಾಣವನ್ನು ತಿಳಿಸುವುದಾಗಿದೆ. ಏಕೆಂದರೆ ಮೊದಲು ಎಣಿಸಬಹುದಾದ ಸಂಖ್ಯೆಯನ್ನು ಉಲ್ಲೇಖಿಸಲಾಗಿದೆ - ಅಂದರೆ ಸೃಷ್ಟಿಗಳ ಸಂಖ್ಯೆ. ನಂತರ ಅದಕ್ಕಿಂತ ಶ್ರೇಷ್ಠವಾದುದಕ್ಕೆ ಏರಲಾಗಿದೆ ಮತ್ತು ಅದನ್ನು "ಅವನ ಆತ್ಮದ ತೃಪ್ತಿ" ಎಂದು ವ್ಯಕ್ತಪಡಿಸಲಾಗಿದೆ. ನಂತರ ಅತ್ಯಂತ ದೊಡ್ಡ ಸೃಷ್ಟಿಯಾದ ಅರ್ಶ್ನ ತೂಕವನ್ನು ತಿಳಿಸಲಾಗಿದೆ. ಮೊದಲನೆಯದು ಸಂಖ್ಯೆ ಮತ್ತು ಪ್ರಮಾಣವನ್ನು, ಎರಡನೆಯದು ವಿವರಣೆ ಮತ್ತು ಗುಣಮಟ್ಟವನ್ನು, ಮತ್ತು ಮೂರನೆಯದು ಶ್ರೇಷ್ಠತೆ ಮತ್ತು ತೂಕವನ್ನು ಸೂಚಿಸುತ್ತದೆ.

http://www.sunnah.global/hadeeth/kn/show/5508